**ಒ ಎಸ್ ನಂ. 28/2022**
**ಡಿ ಡಬ್ಲ್ಯೂ: 02**

**ದಿಃ 10-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ ಆರ್ ಜಿ ಎನ್ ವಕೀಲರಿಂದಃ</u>**

ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ ವಿಷಯಗಳು ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯಗಳು ವ್ಯತಿರಿಕ್ತವಾಗಿವೆ ಅಂದರೆ ಸರಿಯಲ್ಲ. ಖಾತಾ ನಂಬರ 34 ರಂತೆ ನಮಂ ತಂದೆ ಮರಣ ಹೊಂದಿದ ನಂತರ ನಮ್ಮ ಹೆಸರುಗಳು ವಾರಸಾನಾತೆಯಿಂದ ದಾಖಲಾದ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಗೊತ್ತಿಲ್ಲ. ಸದರಿ ಖಾತೆ ಪ್ರಕಾರ ನಾವು ವಾರಸುದಾರರು ಅಲ್ಲ ಅಂದರೆ ಸರಿಯಲ್ಲ. ಎಚ್ ಆರ್ ಗುಡಿಯವರು ನಮ್ಮ ಕಾಕಾ ಮದ್ವಾಚಾರ ಗುಡಿ ಇವರಿಗೆ ದತ್ತಕಕ್ಕೆ ಹೋಗಿರುತ್ತಾರೆ ಎನ್ನುವ ಬಗ್ಗೆ ದಿನಾಂಕ ನೆನಪಿಲ್ಲ. ಮನೆ ಮತ್ತು ಹೊಲಗಳಿಗೆ ಸಂಬಂಧಿಸಿದಂತೆ ದತ್ತಕಕ್ಕೆ ಹೋಗಿರುತ್ತಾರೆ. ಮನೆ ಆಸ್ತಿ ನಂಬರ ನೆನಪಿಲ್ಲ. ಜಮೀನಿನ ಸರ್ವೆ ನಂಬರ 89, ಬೇರೆ ನಂಬರಗಳು ಗೊತ್ತಿಲ್ಲ. ಯಾವ ವರ್ಷದಿಂದ ದತ್ತಕಕ್ಕೆ ಹೋಗಿರುತ್ತಾರೆ ಎಂದು ನೆನಪಿಲ್ಲ. ದತ್ತಕ ಪತ್ರ ಆಗಿರುವುದು ಗೊತ್ತಿಲ್ಲ. ದತ್ತಕ ಪತ್ರ ಆಗಿದೆ.

ದತ್ತಕ ನೋಂದಣಿ ಆಗಿದ್ದರೆ ದಾಖಲೆ ಸಿಗುತ್ತದೆ ಎಂದರೆ ಸಾಕ್ಷಿ ಆಗ ದತ್ತಕ ನೋಂದಣಿ ಆಗಿರುವುದಿಲ್ಲ ಎನ್ನುತ್ತಾರೆ. ದತ್ತಕ ಪತ್ರದ ಮೂಲ ಪ್ರತಿ ಇರುತ್ತದೆಯೇ ಎಂದರೆ ಸಾಕ್ಷಿ ಒಂದು ಹಾಳೆ ಇರುತ್ತದೆ ಎನ್ನುತ್ತಾರೆ. ಸದರಿ ಹಾಳೆಯನ್ನು ನಾನು ಓದಿಲ್ಲ.

ದತ್ತಕ ಪತ್ರಕ್ಕೆ ಜನಕ ತಂದೆ ತಾಯಿ ಹಾಗೂ ದತ್ತಕ ತಂದೆ ತಾಯಿ ದಾಖಲೆಗೆ ಸಹಿ ಮಾಡುತ್ತಾರೆ ಹಾಗೂ ಅದರ ಸಂಬಂಧಪಟ್ಟ ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ ಎಂದರೆ ಸಾಕ್ಷಿ ನಾನು ಹುಟ್ಟುವ ಮುಂಚೆ ಅದು ಆಗಿದ್ದು ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಕಾಕಾ ರವರು ದತ್ತಕದ ಬಗ್ಗೆ ಹೇಳುತ್ತಿದ್ದರು ಆದ್ದರಿಂದ ನಾನು ನನ್ನ ಪ್ರಮಾಣ ಪತ್ರದಲ್ಲಿ ಈ ಬಗ್ಗೆ ತಿಳಿಸಿದ್ದೇನೆ. ದತ್ತಕ ಪತ್ರದಲ್ಲಿ ನಿಪಿ-32 ರ ಬಗ್ಗೆ ಉಲ್ಲೇಖ ಮಾಡಿರುವುದು ನನಗೆ ಗೊತ್ತಿಲ್ಲ. ಎಚ್ ಅರ್ ಅಂದರೆ ಹನಮಂತಾಚರ ರಾಘವೇಂದ್ರಆಚಾರ ಗುಡಿ. ರಾಘವೇಂದ್ರಆಚಾರ ತಾಯಿ ಹೆಸರು ಗೊತ್ತಿಲ್ಲ. ಎಂ ಆರ್ ನಂ 675 ರ ಪ್ರಕಾರ ನಮ್ಮ ತಂದೆ ಹೆಸರು ಎಚ್ ಆರ್ ಗುಡಿ ಎಂದು ದಾಖಲಾಗಿದೆ. ಎಚ್ ಆರ್ ಗುಡಿ 2012 ರಲ್ಲಿ ಮರಣ ಹೊಂದಿದ್ದಾರೆ. ನಮ್ಮ ತಂದೆಯನ್ನು ನಾನು ಸದರಿಯವರು ದತ್ತಕಕ್ಕೆ ಹೋದ ಬಗ್ಗೆ ಅವರನ್ನು ವಿಚಾರಿಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಅಜ್ಜನ ಹೆಸರು ರಾಘವೇಂದ್ರಆಚಾರ ಎಂದು ಬರೆದಿದ್ದು ಅವರನ್ನು ಬೇರೆ ಯಾವ ಹೆಸರಿನಿಂದ ಕೆರಯುತ್ತಿದ್ದರು ಎಂಬುದರ ಬಗ್ಗೆ ನಮೂದಿಸಿಲ್ಲ ಆದರೆ ಅವರನ್ನು ರಾವಾಚಾರಿ ಗುಡಿ ಎಂದು ಕರೆಯುತ್ತಿದ್ದರು ಅನ್ನುತ್ತಾರೆ. ದಿನಾಂಕ 02.01.1943 ರಂದು ಮದ್ವಾಚಾರ ಗುಡಿಯವರು ಎಚ್ ಆರ್ ಗುಡಿ ಇವರಿಗೆ ಹಕ್ಕುಬಿಟ್ಟ ಪತ್ರವನ್ನು ಬೆರದುಕೊಟ್ಟಿಲ್ಲ ಎನ್ನುವದು ಸುಳ್ಳು. ಮದ್ವಾಚಾರ ಗುಡಿಯವರು ಬರೆದುಕೊಟ್ಟ ಹಕ್ಕುಬಿಟ್ಟ ಪತ್ರವನ್ನು ಹನಮಂತ ಮದ್ವಾಚಾರ ಗುಡಿ ಎನ್ನುವವರಿಗೆ ಬರೆದುಕೊಟ್ಟ ಬಗ್ಗೆ ನಮೂದಿಸಿಲ್ಲ ಅಂದರೆ ಸರಿಯಲ್ಲ.

ಹನಮಂತಚಾರ ರಾಘವೇಂದ್ರಆಚಾರ ಗುಡಿ ಇವರ ಹೆಸರಿಗೆ ಸಂಬಂಧಿಸಿದ ಯಾವುದೆ ದಾಖಲೆಗಳನ್ನು ನಾನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. 1943 ರಿಂದ 2012 ರವರೆಗೆ ಎಚ್ ಆರ್ ಗುಡಿ ಇವರು ಮರಣ ಹೊಂದುವವರೆಗೆ ಆಸ್ತಿಗಳಿಗೆ ಸಂಬಂಧಿಸಿದ ಯಾವುದೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. 1943 ರಿಂದ 2012 ರವರೆಗೆ ಎಚ್ ಆರ್ ಗುಡಿಯವರು ಎಂದಿಗೂ ಆಸ್ತಿಯನ್ನು ಸಾಗುವಳಿ ಮಾಡಿರಲಿಲ್ಲ ಅಂದರೆ ಸರಿಯಲ್ಲ. ಎಚ್ ಆರ್ ಗುಡಿಯವರು ಮರಣ ಹೊಂದಿದ ನಂತರ ಆಸ್ತಿ ದಾಖಲೆಗಳಲ್ಲಿ ನಮ್ಮ ಹೆಸರು ಎಂದಿಗೂ ದಾಖಲಾಗಿಲ್ಲ ಅಂದರೆ ಸರಿಯಲ್ಲ. 1943 ರಿಂದ 2012 ರವರೆಗೆ ನಮ್ಮ ತಂದೆ ಹಾಗೂ ನಮ್ಮ ಹೆಸರುಗಳು ಜಂಟಿ ಆಗಿ ಆಸ್ತಿಗಳಲ್ಲಿ ದಾಖಲಾದ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿ ಸದರಿ ದಾಖಲೆಗಳು ಇರುವುದಿಲ್ಲ ಎನ್ನುತ್ತಾರೆ. ನಮ್ಮ ತಂದೆ ಹನಮಂತಚಾರ ರಾಘವೇಂದ್ರಆಚಾರ ಗುಡಿ ಇವರ ಹೆಸರಿನಲ್ಲಿ

ಯಾವುದೆ ದತ್ತಕ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನಾನು ದತ್ತಕ ದಾಖಲೆಯನ್ನು ಹಾಜರ ಪಡಿಸಿಲ್ಲ. ನಾನು ನನ್ನ ಪ್ರಮಾಣ ಪತ್ರವನ್ನು ನನಗೆ ಅನುಕೂಲವಾಗುವಂತೆ ಬರೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಪ್ರತಿವಾದ ಪತ್ರ ಹಾಗೂ ಹೇಳಿಕೆಯನ್ನು ಆದರಿಸಿ ಸಲ್ಲಿಸಿದ್ದೇನೆ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ತಿಮ್ಮಾಜಿ ನಾರಾಯಣರಾವ್ ದೇಸಾಯಿ ಇವರು 1945 ರಲ್ಲಿ ಮರಣ ಹೊಂದಿದ ನಂತರ ಯಾವುದೆ ಭಕ್ಷಿಸ ಪತ್ರ ಆಗಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಒಬ್ಬ ಚನ್ನಪ್ಪ ಶೆಟವಪ್ಪ ಗೌಳಿ ಎನ್ನುವವರು ರೈತನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಹಕ್ಕುಬಿಟ್ಟ ಪತ್ರದಲ್ಲಿ ದಾವಾ ಆಸ್ತಿ ಒಂದೆ ಇರುತ್ತದೆ. ಸರ್ವೆ ನಂ 37, 38, 39 ಕ್ಕೆ ಇದಕ್ಕೆ ತಿಪ್ಪಣ್ಣ ಕಲ್ಲಪ್ಪ ದೊಡ್ಡಮನಿ ಹಾಗೂ ಇತರರು ಮಾಲೀಕರು ಅಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಹಕ್ಕುಬಿಟ್ಟ ಪತ್ರದಲ್ಲಿ ನಮೂದ ಇರುವ ಆಸ್ತಿಗಳು ಎನ್ನುವದು ಸುಳ್ಳು. ಸದರಿ ಮಾಲೀಕರು ಆಸ್ತಿಗಳಿಗೆ ಹಕ್ಕುದಾರರು ಇರುತ್ತಾರೆ ಅಂದರೆ ಸರಿಯಲ್ಲ. ನಿಡಿ-32 ರಲ್ಲಿ ತಿಪ್ಪಣ್ಣ ದೊಡ್ಡಮನಿ ಹಾಗೂ ಇತರರ ಹೆಸರುಗಳು ಸರ್ವೆ ನಂ 37, 38, 39 ರ ಬೇರೆ ಆಸ್ತಿಗಳಿಗೆ ದಾಖಲಾಗಿರುತ್ತವೆ ಎನ್ನುವದು ಸುಳ್ಳು. ಸದರಿ ಮಾಲೀಕರು ಆಸ್ತಿಗಳಿಗೆ ಹಕ್ಕದಾರರು ಎನ್ನುವದು ಸುಳ್ಳು. 1943 ರಿಂದ 2025 ರವರೆಗೆ ಸದರಿ ಆಸ್ತಿಗಳಿಗೆ ನಮ್ಮ ಹೆಸರುಗಳು ಎಂದಿಗೂ ದಾಖಲಾಗಿರುವುದಿಲ್ಲ ಎನ್ನುವದು ಸುಳ್ಳು. ನಿಡಿ-32 ರ ಪ್ರಕಾರ ಮದ್ವಾಚಾರ ರಾಮಚಾರ ಗುಡಿ ಇವರು ತೋರವತ್ತಿ ಎಂದು ಅರ್ಧ ಆಸ್ತಿಯನ್ನು ನೀಲಕಂಠ ಕುಲಕರ್ಣಿ ಇವರಿಗೆ ಕೊಟ್ಟಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ಅದೇ ರೀತಿ ನಿಡಿ-32 ರ ಪ್ರಕಾರ ಮದ್ವಾಚಾರ ರಾಮಚಾರ ಗುಡಿಯವರು ಚನ್ನಬಸಪ್ಪ ಫಕ್ಕೀರಪ್ಪ ಕಟ್ಟಿ ಇವರಿಗೆ ಸರ್ವೆ ನಂ 48 ನ್ನು ಬಿಟ್ಟು ಕೊಟ್ಟಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ನಿಡಿ-32 ರ ಸಾಕ್ಷಿದಾರರ ಹೆಸರುಗಳು ನನಗೆ ಗೊತ್ತಿಲ್ಲ. ನಿಡಿ-32 ನಮ್ಮ ತಂದೆಯ ಹೆಸರಿನಲ್ಲಿ ಇಲ್ಲದಿದ್ದರೂ ಕೂಡಾ ಅದನ್ನು ಖೊಟ್ಟಿಯಾಗಿ ಸೃಷ್ಟಿಸಿ ಹಾಜರ ಪಡಿಸಿದ್ದೇನೆ ಅಂದರೆ ಸರಿಯಲ್ಲ. ನಿಡಿ-32 ಕೇವಲ ಮದ್ವಾಚಾರ ಗುಡಿ ಹಾಗೂ ಅವರ ಮಗ ಹನಮಂತಚಾರ ಮದ್ವಾಚಾರ ಗುಡಿ ಇವರ ಮಧ್ಯ ಆದ ಮಾತ್ರ ದಾಖಲೆ ಅಂದರೆ ನಿಜ. ನಿಡಿ-32 ನಮ್ಮ ತಂದೆಗೆ ಸೇರಿದ ದಾಖಲೆ ಅಲ್ಲ ಅಂದರೆ ಸರಿಯಲ್ಲ. ನಿಡಿ-32 ರ ಪ್ರಕಾರ ನಾನು ದಾವಾ ಆಸ್ತಿಯ ಮಾಲೀಕ ಎಂದು ಸುಳ್ಳು ವಾದ ಮಂಡಿಸುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ಕೃಷ್ಣರಾವ್ ನಾರಾಯಣರಾವ ದೇಸಾಯಿ ಇವರಿಗೆ ಸೇರಿದ ಆಸ್ತಿಗಳಾಗಿದ್ದು ವಾದಿಯರು ಅವರ ವಾರಸುದಾರರು ಆಗಿದ್ದು ಅವರು ಮಾಲೀಕರು ಅಂದರೆ ಸರಿಯಲ್ಲ. ತಿಮ್ಮಾಜಿ ದೇಸಾಯಿ ಇವರು ದಾವಾ ಆಸ್ತಿಗೆ ಸಂಬಂಧಿಸಿದಂತೆ 1875 ರಿಂದ 1935 ರವರೆಗೆ

ಯಾವುದೆ ಭಕ್ಷಿಸ ಪತ್ರ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ವಾದಿಯರು ಹಾಗು ಪ್ರತಿವಾದಿ ನಂ 1 ರವರು ತಿಮ್ಮಾಜಿಯ ವಾರಸುದಾರರಾಗಿದ್ದು ಅವರು ಮಾತ್ರ ದಾವಾ ಆಸ್ತಿಯ ಮಾಲೀಕರು ಅಂದರೆ ಸರಿಯಲ್ಲ. ನಾನು ಸಲ್ಲಿಸಿದ ಪ್ರತಿವಾದ ಪತ್ರ, ಸಾಕ್ಷಿ, ಮುಖ್ಯ ವಿಚಾರಣೆ ಹಾಗೂ ದಾಖಲೆಗಳು ಖೊಟ್ಟಿಯಾಗಿರುತ್ತವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**